# ಒಡವೆಯಲ್ಲಿ ಗಿಣಿರಾಮ!



ಒಡವೆಗಳಲ್ಲಿ ವಿನೂತನ ವಿನ್ಯಾಸ ಮಾಡಿ, ಪ್ರಕೃತಿಗೆ ಅತ್ಯಂತ ಸನಿಹವಾಗುವಂತಿರುವ ಬಣ್ಣಗಳನ್ನು ಆಯ್ಕೆ ಮಾಡಿ ಒಡವೆಪ್ರಿಯರನ್ನು ಸೆಳೆಯುವಲ್ಲಿ ಗಿಳಿ ಒಡವೆಗಳು ಯಶಸ್ವಿಯಾಗಿವೆ. ಆಭರಣದ ಮೇಲೆ ಪ್ರಾಣಿ ಪಕ್ಷಿಗಳ ಚಿತ್ತಾರ ಮೂಡಿಸಿ, ದೇವತೆಗಳ ಪ್ರತಿರೂಪವನ್ನು ಕೆತ್ತಿ, ಹೂವಿನ, ಬಳ್ಳಿಯ ವಿನ್ಯಾಸ ಮಾಡಿದರೆ ಮಹಿಳೆಯರ ಮೆಚ್ಚು ಆಗುವುದರಲ್ಲಿ ಸಂಶಯವಿಲ್ಲ.

■ **ಉಮಾ ಅನಂತ್**

ಮಹಿಳೆಯರಿಗೆ ಆಭರಣದ ಮೇಲಿನ ಕ್ರೇಜ್ ಇಂದು ನಿನ್ನೆಯದಲ್ಲ. ಇದಕ್ಕಾಗಿಯೇ ಫ್ಯಾಷನ್ ಪ್ರಪಂಚವೂ ಸದಾ ಹೊಸತನಕ್ಕೆ ತೆರೆದುಕೊಳ್ಳುತ್ತಿರುವುದು. ಸಾದಾ ವಿನ್ಯಾಸದ ಒಡವೆಗಳಿಗಿಂತ ಈಗೀಗ ವಿಭಿನ್ನವಾಗಿರುವ ಹಾಗೂ ಎದ್ದುಕಾಣುವಂಥ ಒಡವೆಗಳಿಗೇ ಹೆಚ್ಚಿನ ಪ್ರಾಶಸ್ತ್ಯ. ಹೀಗಾಗಿ ಒಡವೆ ವರ್ತಕರು ಬೇರೆ ಬೇರೆ ಹೊಚ್ಚಹೊಸ ವಿನ್ಯಾಸದ ಆಭರಣಗಳ ಸೆಟ್ ಅನ್ನು ಮಾರುಕಟ್ಟೆಗೆ ತರುತ್ತಿದ್ದಾರೆ.

ಆಭರಣಗಳಲ್ಲಿ ಫ್ಲೋರಲ್ ಡಿಸೈನ್ (ಹೂವಿನ ಆಕಾರದ ವಿನ್ಯಾಸ) ಮಹಿಳೆಯರನ್ನು ಸೂಜಿಗಲ್ಲಿನಂತೆ ಸೆಳೆದದ್ದೇ ತಡ, ವಿವಿಧ ಪ್ರಾಣಿಗಳ, ಪಕ್ಷಿಗಳ ವಿನ್ಯಾಸದ ಒಡವೆ ಬಂತು. ಆನೆಗಳ ಉಳಿವಿನ ಜಾಗೃತಿಗಾಗಿಯೇ ಆನೆಯ ಮುಖದ ಉಂಗುರ, ನೆಕ್ಲೇಸ್, ಬ್ರೇಸ್‌ಲೆಟ್‌ಗಳು ಸೆಳೆಯಿತು. ನವಿಲಿನ ವಿನ್ಯಾಸದ ಒಡವೆಗಳು ಎಲ್ಲ ಪ್ರಕಾರಗಳ ಒಡವೆಗಳಲ್ಲೂ ವಿನ್ಯಾಸಗೊಂಡಿತು. ಇದೀಗ ಗಿಣಿಯನ್ನೇ ಹೋಲುವ ತರಾವರಿ ಒಡವೆಗಳು ಆಕರ್ಷಕವಾಗಿ ಒಡವೆ ಪ್ರಪಂಚಕ್ಕೆ ಕಾಲಿಟ್ಟಿದೆ.

ಆಭರಣ ಲೋಕದಲ್ಲಿ ಹೊಸತನವನ್ನೇ ಕಾಯ್ದುಕೊಂಡು ಬಂದಿರುವ ಕರಾಟ್‌ಲೇನ್ ಈ ಗಿಣಿ ವಿನ್ಯಾಸದ ಒಡವೆಗಳನ್ನು ಹೊರತಂದಿದೆ. ಇದಕ್ಕೆ 'ಪೆರು ಕಲೆಕ್ಷನ್' ಎಂದು ಹೆಸರಿಡಲಾಗಿದೆ. ಗಿಳಿಗಳು ಆಟವಾಡುತ್ತಿರುವುದನ್ನು ಕಂಡ ಒಡವೆ ವಿನ್ಯಾಸಗಾರ ತನ್ನ ಕಲ್ಪನೆಯ ಮೂಸೆಯಲ್ಲಿ ಇದಕ್ಕೆ ಒಂದು ಸ್ಪಷ್ಟರೂಪ ನೀಡಲಾರಂಭಿಸಿದ. ಇದು ಸಂತೋಷ, ಸಂಭ್ರಮ ಮತ್ತು ಆಚರಣೆಯ ಸಂಕೇತ ಎಂದೂ ವಿನ್ಯಾಸಗಾರ ಹೇಳುತ್ತಾ, ಉಂಗುರ, ಕಿವಿಯೋಲೆ, ಪೆಂಡೆಂಟ್‌ಗಳಲ್ಲಿ ಗಿಳಿಯ ಪ್ರತಿರೂಪ ಸೃಷ್ಟಿಸಿದ. ಇದು ಈಗ ಫ್ಯಾಷನ್ ಟ್ರೆಂಡ್ ಕೂಡ ಆಗಿದೆ.

ವರ್ಣರಂಜಿತ ಒಡವೆ ಎಂದಿಗೂ ಮಹಿಳೆಯರ ಮೆಚ್ಚು. ಇದನ್ನು ಧರಿಸಿಕೊಂಡು ಉಡುಪಿಗೆ ಮಿಕ್ಸ್ ಅಂಡ್ ಮ್ಯಾಚ್ ಕೂಡ ಮಾಡಿಕೊಳ್ಳಬಹುದು. ಇದಕ್ಕಾಗಿ ಒಡವೆಯಲ್ಲಿ ಜೆಮ್‌ಸ್ಟೋನ್, ವಜ್ರ ಹಾಗೂ ಚಿನ್ನವನ್ನು ಸೇರಿಸಿ ಈ ಆಭರಣ ವಿನ್ಯಾಸ ಮಾಡಲಾಗಿದೆ. ಹಸುರು, (ಜೇಡ್) ಕೆಂಪು, (ರೂಬಿ) ಬಿಳಿ ಹರಳು (ವಜ್ರ ಅಥವಾ ಅಮೆರಿಕನ್ ಡೈಮಂಡ್) ಗಳು ಒಡವೆಯನ್ನು ಮತ್ತಷ್ಟು ಆಕರ್ಷಕವಾಗುವಂತೆ ಮಾಡಿದೆ. ಗಿಳಿಯ ಬಣ್ಣವನ್ನೇ ಹೋಲುವ ಹಸುರು ಹಾಗೂ ಕೆಂಪು ಬಣ್ಣ ಒಡವೆಗೆ ನೈಸರ್ಗಿಕ ಲುಕ್ ಕೊಡಲು ಸಹಕಾರಿಯಾಗಿದೆ.

ಆಭರಣ ವಿನ್ಯಾಸಗಾರನ ಕೈಚಳಕ ವ್ಯಕ್ತವಾಗುವುದು ಆತ ತಯಾರಿಸಿ ಡಿಸೈನ್‌ನಲ್ಲಿ. ನವಿಲಿನ ಮಾದರಿಯ, ಗಿಳಿಯ ವಿನ್ಯಾಸದ, ಹೂವಿನ ಆಕಾರದ, ದೇವಾನುದೇವತೆಗಳನ್ನು ಒಡವೆಗಳಲ್ಲಿ ಒಡಮೂಡಿಸುವ ಮೂಲಕ ಸಾಧ್ಯವಾದಷ್ಟು ಪ್ರಕೃತಿ, ಪರಿಸರಕ್ಕೆ ಹತ್ತಿರವಾಗುವಂತೆ